<u>ಪ್ರಧಾನ ನ್ಯಾಯಾದೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕುಂದಾಪುರ</u>

ಸಿಸಿ ನಂಬ್ರಃ 179/2024
ಸಿಡಬ್ಲ್ಯೂ- 1
ಪಿಡಬ್ಲ್ಯೂ- 1

| | | |
|---|---|---|
| ಸಾಕ್ಷಿದಾರರ ಹೆಸರು | : | ಶೇಖರ ಪೂಜಾರಿ |
| ತಂದೆಯ ಹೆಸರು | : | ಶೇಷ ಪೂಜಾರಿ |
| ಪ್ರಾಯ | : | 85 ವರ್ಷ |
| ಉದ್ಯೋಗ | : | ನಿವೃತ್ತ ಪಾರೆಸ್ಟ್ ಗಾರ್ಡ್, ಅಮಾಸಬೈಲು ವಲಯ |
| ವಾಸ | : | ಬ್ರಹ್ಮಾವರ |

ದಿನಾಂಕಃ **06-10-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೊಧಿಸಲಾಯಿತು

<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ</u>

ಆರೋಪಿತ ಅಂದಾಜು ಆಗುತ್ತಿಲ್ಲ. ನನಗೆ ನೆನಪಿನ ಶಕ್ತಿ ಇಲ್ಲದೇ ಇರುವುದರಿಂದ ಗುರುತಿಸಲು ಆಗುವುದಿಲ್ಲ. ನನಗೆ ಆರೋಪಿತನ ಪ್ರಕರಣದ ಬಗ್ಗೆ ಯಾವುದೇ ನೆನಪು ಆಗುತ್ತಿಲ್ಲ. ನಾನು ಪ್ರಕರಣವನ್ನು ದಾಖಲು ಮಾಡಿರಬಹುದು. ತಕ್ಷೀರನ್ನು ಪತ್ತೇ ಹಚ್ಚಿರಬಹುದು, ನೆನಪಿರುವುದಿಲ್ಲ.

ಸಾಕ್ಷಿಗೆ ದಾಖಲೆಯನ್ನು ತೋರಿಸಿದ್ದು, ಸಾಕ್ಷಿ ದಾಖಲೆ ನೋಡಿ ಬರವಣಿಗೆ ನನ್ನದೆ ಇರುತ್ತದೆ. ನಾನೇ FIR ಮಾಡಿರುತ್ತೇನೆ. ಚಿತ್ತರಂಜನ್ ರವರ ಮೇಲೆ ಮಾಡಿರುತ್ತೇನೆ. 1993-94 ರಲ್ಲಿ ಮಾಡಿರುತ್ತೇನೆ. ಮರದ ದಿಮ್ಮಿಯ ವಿಚಾರವಾಗಿ ಮಾಡಿರುತ್ತೇನೆ. ಸಾಕ್ಷಿಗೆ ಇನ್ನೊಂದು ದಾಖಲೆ ತೋರಿಸಿದ್ದು ಸಾಕ್ಷಿ ದಾಖಲೆ ನೋಡಿದ್ದು ಮರಗಳನ್ನು ಸೀಜ್ ಮಾಡುವಾಗ ತಯಾರಿಸಿದ ದಾಖಲೆ ಆಗಿರುತ್ತದೆ. ಮತ್ತಿ, ಗೊದ್ದ, ಮಾವು, ಮರವ, ಬೀಟೆ ಮರದ ದಿಮ್ಮಿಗಳನ್ನು ಸೀಜ್ ಮಾಡಿರುತ್ತೇನೆ. ಸಾಕ್ಷಿ ದಾಖಲೆಗಳನ್ನು ನೋಡಿ ತನ್ನ ಸಹಿ ಗುರುತಿಸಿದ್ದು ಅವುಗಳನ್ನು ನಿ.ಪಿ.1/FIR ಮತ್ತು ನಿ.ಪಿ.2/ಫಾರಂ ನಂಬ್ರ 20 ಎಂದು, ಸಹಿಯನ್ನು ನಿ.ಪಿ. 1(ಎ) ಮತ್ತು 2(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಿದ್ದು, ಸಾಕ್ಷಿ ದಾಖಲೆ ನೋಡಿ ದಿನಾಂಕ 30-08-1993 ರಲ್ಲಿ ಒಟ್ಟಿಗೆ 17 ಮರಗಳನ್ನು ಸರ್ಕಾರಿ ಜಾಗದಲ್ಲಿ ಮಾವಿನ ಕಾಡುವಿನಲ್ಲಿ ನನ್ನ ಜೊತೆಗೆ ಕೊರಗಪ್ಪ ಗೌಡ, ಶಾವಿಲ್ ಅಮೀದ್, ಮಲ್ಲಪ್ಪ ಇದ್ದರು. ತಕ್ಷೀರು ಸ್ಥಳದಲ್ಲಿ ಮಹಜರು ಮಾಡಿದ ಬಗ್ಗೆ ದಾಖಲೆ ಇರುತ್ತದೆ ಎಂದು ನುಡಿದು ಸದರಿ ದಾಖಲೆಯನ್ನು ನಿ.ಪಿ.3 ಎಂದು, ಸಾಕ್ಷಿಯ

ಸಹಿಯನ್ನು ನಿ.ಪಿ.3(ಎ) ಎಂದು ಗುರುತಿಸಲಾಯಿತು.

ಈ ಸಂದರ್ಭದಲ್ಲಿ ಆರೋಪಿ ಪರ ವಕೀಲರು ಚಾಸಾ **1** ರವರು ನೆನಪಿಲ್ಲ ಎಂದು ಹೇಳಿದ್ದು,ಚಾಸಾ **1** ರವರು ದೂರುದಾರರಿರುವುದರಿಂದ ದಾಖಲೆಯನ್ನು ಓದಿ ಹೇಳಲು ಆಗಿರುವುದಿಲ್ಲ. ಹಾಗಾಗಿ ಎಪಿಪಿ ಯವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಬೇಕೆಂದು ನುಡಿದಿದ್ದು, ಮಾನ್ಯ ಸಹಾಯಕ ಸರ್ಕಾರಿಯವರು ಚಾಸಾ **1** ರವರಿಗೆ **85** ವರ್ಷ ಆಗಿರುವುದರಿಂದ ತಾನು ತಯಾರಿಸಿದ ದಾಖಲೆ ನೋಡಿದರೆ ಮಾತ್ರ ಹೇಳಲು ಸಾಧ್ಯ ಇರುತ್ತದೆ ಹಾಗಾಗಿ ದಾಖಲೆಗಳನ್ನು ತೋರಿಸುವುದಾಗಿ ನುಡಿದಿದ್ದು ಚಾಸಾ **1** ರವರು ದೂರುದಾರರಿರುವುದರಿಂದ ಕೇವಲ ಸಹಿಯನ್ನು ಗುರುತಿಸಲು ಅನುವು ಕೊಟ್ಟು ಉಳಿದಂತೆ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಗಿರುತ್ತದೆ.

ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ

ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಿದ್ದು, ಸಾಕ್ಷಿ ದಾಖಲೆ ನೋಡಿ ಇದು ಇನ್ನೊಂದು ಮಹಜರು ಇರುತ್ತದೆ ಎಂದು ನುಡಿದು ದಿನಾಂಕ 09-09-1993 ರಂದು 30-08-1993 ರಂದು ಆರೋಪಿಯ ಮನೆಯ ಆಸುಪಾಸಿನಲ್ಲಿ ಅಡವು ಇಟ್ಟಿದ್ದ ಸೈಜುಗಳನ್ನು ಸೀಜ್ ಮಾಡಿರುತ್ತೇನೆ. ಆ ಸಮಯದಲ್ಲಿ ಅಣವು ಮರ, ಮತ್ತಿ ಮರ, ಕಣಲ್, ಮರ್ವ ಸೀಜ್ ಮಾಡಿರುತ್ತೇನೆ. ಅಲ್ಲಿ ತುಂಡು ಇತ್ತು, ಸೈಜ್ ಕೂಡ ಇತ್ತು. ತಕ್ಷೀರು ನಡೆದಿದ್ದು ಮಾವಿನಕಾಡುನಲ್ಲಿ. ಈ ವಿಚಾರವಾಗಿ ಹೇಳಿಕೆ ಕೊಟ್ಟಿರುತ್ತೇನೆ. ಸದರಿ ದಾಖಲೆಯನ್ನು ನಿ.ಪಿ.4 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.4(ಎ) ಎಂದು ಗುರುತಿಸಲಾಯಿತು.

ದಿನಾಂಕ 30-08-1993 ರಂದು ಮಾವಿನಕಾಡು ಚಿತ್ತರಂಜನ್ ರಾವ್ ಅವರ ಮನೆಯಲ್ಲಿ ಅಕ್ರಮವಾಗಿ ಕಾಡು ಜಾತಿಯ ಮರಗಳನ್ನು ದಾಸ್ತಾನು ಇಟ್ಟಿದ್ದಾರೆ ಎಂದು ಮಾಹಿತಿ ಬಂದಿರುತ್ತದೆ ಎಂದರೆ ಸರಿ. ಎಒಫ್ ಒ ರವರ ಆದೇಶದ ಮೇರೆಗೆ ನಾನು, ಚಾಸಾ 2 ರಿಂದ 6 ಮತ್ತು ಚಾಸಾ 9 ರವರು ಆರೋಪಿಯ ಮನೆಯ ಹೋಗಿರುತ್ತೇವೆ ಎಂದರೆ ಸರಿ. ಆ ಸಮಯದಲ್ಲಿ ಚಾಸಾ 9 ರವರು ನಮ್ಮ ಜೊತೆಗೆ ಇರಲಿಲ್ಲ. ಆರೋಪಿಯ ಮನೆಗೆ ಹೋದಾಗ ಹೊಸ ಕಾಡು ಜಾತಿಯ ಮರಗಳನ್ನು ಗರಗಸದಲ್ಲಿ ಕೊಯಿದು ಇಟ್ಟಿರುವುದು ಕಂಡು ಬಂದಿರುತ್ತದೆ ಎಂದರೆ ಸರಿ. ಆ ಕೊಯಿದ ಮರಗಳ ಮೇಲೆ ಸರ್ಕಾರಿ ಚಾಪಾ ಯಾವುದು ಇರಲಿಲ್ಲ, ಸಾಕ್ಷಿ ನಾವು ಹೊಡೆದಿರುತ್ತೇವೆ ಎಂದು ನುಡಿಯುತ್ತಾರೆ.

ಮಾವು, ಮರ್ವ, ಗೊದ್ದ, ಮತ್ತಿ ಮರಗಳು ಇದ್ದವು ಎಂದರೆ ಸರಿ. ಒಟ್ಟು 32 ಸೈಜುಗಳು ಇದ್ದವು ಎಂದರೆ ಸರಿ. ಮತ್ತಿ ರೀಪುಗಳು 25 ಇದ್ದವು ಎಂದರೆ ಸರಿ. ಅರ್ ಎಮ್ ಟಿ ಮತ್ತು ಅಣವು ಜಾತಿಯ ಪರೋಟ(ವೆಸ್ಟ್)ಗಳು ಇದ್ದವು ಎಂದರೆ ಸರಿ. ಆ ಎಲ್ಲಾ ಮರಗಳಿಗೆ ಹಳದಿ ಬಣ್ಣದ ಆಯಿಲ್ ಚಾಕ್ ನಿಂದ ಜಂಜರ್ ನಂಬ್ರ ನಮೂದಿಸಿ ಕೆ ಎನ್ ಎಫ್ ಡಿ ಎಫ್ 11 ಆರ್ ಸರ್ಕಾರಿ ಚಾಪಾ ಮುದ್ರೆ ಮಾಡಿರುತ್ತೇವೆ ಎಂದರೆ ಸರಿ. ಆ ಮನೆಯ ಆಸುಪಾಸಿನ ಜಾಗದಲ್ಲಿ ನಾನು

ಹಾಗೂ ಸಿಬ್ಬಂದಿಗಳು ಯಾವುದದಾದರೂ ಮರಗಳು ಕಟಾವು ಮಾಡಿರುತ್ತಾರಾ ಎಂದು ಹೋಗಿ ನೋಡಿರುತ್ತೇವೆ ಎಂದರೆ ಸರಿ. ಆ ಜಾಗದಲ್ಲಿ ಕಟಾವು ಮಾಡಿದ ಮರಗಳ ಕೆಳಗೆ ಹುಡಿಗಳು ಕೆಳಗೆ ಬಿದ್ದಿರುತ್ತದೆ ಎಂದರೆ ಸರಿ. ಸಣ್ಣ ಸಣ್ಣ ಬೀಟೆ ಮರದ ಸೈಜ್ ಸಿಕ್ಕಿರುತ್ತದೆ ಎಂದರೆ ಸರಿ. 3 ಬೀಟೆ ಮರದ ಸೈಜ್ ಸಿಕ್ಕಿರುತ್ತದೆ ಎಂದರೆ ಸರಿ. ಅದೇ ಸಮಯ ಆರೋಪಿತ ಹೊಸ ಮನೆ ಕಟ್ಟುತಿದ್ದರು ಎಂದರೆ ಸಾಕ್ಷಿ ನನಗೆ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ.

ಆರೋಪಿತ ಮನೆ ಕಟ್ಟುತ್ತಿದ್ದಾಗ ಕಾಡಿನಲ್ಲಿ ಇದ್ದ ಮರಗಳನ್ನು ಕಡಿದ ಮರಗಳನ್ನು ಸರ್ಕಾರಕ್ಕೆ ಮೋಸ ಮಾಡಿದ್ದರು  ಎಂದರೆ ಸರಿ. ಬಾಗಿಲು ಹಾಗೂ ಕಿಟಕಿ ಮಾಡಿಸಿಕೊಂಡಿದ್ದು ಅದನ್ನು ಜಪ್ತಿ ಮಾಡಿಕೊಳ್ಳಲು ಆಗಿರುವುದಿಲ್ಲ ಎಂದರೆ ಸರಿ. 84 ಬೀಟೆ ಜಾತಿಯ ಸ್ವತ್ತುಗಳು ಮನೆಯಲ್ಲಿ ಸಿಕ್ಕಿದ್ದು ಅದನ್ನು ಸೀಜ್ ಮಾಡಿರುವುದಿಲ್ಲ ಎಂದರೆ ಸರಿ. ಆ ಸಮಯ ಆ ಜಾಗದಲ್ಲಿ ಇದ್ದ  ಮನೆಯ ವಾರಸುದಾರರಾದ ಶ್ರೀನಿವಾಸರವರ ಮಗ ಚಿತ್ತರಂಜನ್ ರಾವ್ ಮಾಡಿರುತ್ತಾರೆ ಎಂದು ಗೊತ್ತಾಗಿರುತ್ತದೆ. ಸೀಜ್ ಮಾಡಿಕೊಂಡ ಮರಗಳನ್ನು ನಮ್ಮ ಅರಣ್ಯ ಕಚೇರಿಗೆ ತೆಗೆದುಕೊಂಡು ಹೋಗಿರುತ್ತೇವೆ ಎಂದರೆ ಸರಿ. ಅದಾದ ನಂತರ ಪ್ರಥಮ ವರ್ತಮಾನ ವರದಿಯನ್ನು ಅಮಾನತು ವರದಿ ತಯಾರಿಸಿ ಮೇಲಾಧಿಕಾರಿಯವರಿಗೆ ವರದಿ ಸಲ್ಲಿಸಿರುತ್ತೇನೆ. ದಿನಾಂಕ 09-09-1993 ರಂದು ಪುನಃ ಮನೆಯ ಆಸುಪಾಸು ಮರಗಳನ್ನು ಕಡಿದಿರುತ್ತಾರಾ ಎಂದು ಪರಿಶೀಲನೆಗೆ ಹೋಗಿರುತ್ತೇವೆ ಎಂದರೆ ಸರಿ. ಯಾವುದಾದರೂ ಗುತ್ತಿ ಕಡಿದಿರಬಹುದಾ ಎಂದು ನಾನು ಮತ್ತು ಕೊರಗಪ್ಪ ಹೋಗಿರುತ್ತೇವೆ ಎಂದರೆ ಸರಿ. ಆ ಸಮಯದಲ್ಲಿ ಸ್ಥಳದಲ್ಲಿ ಮರದ ಕಡಿದ ಗುತ್ತಿ ಸಿಕ್ಕಿದ್ದು ಅದಕ್ಕೆ ನಾವು ಸೀಲ್ ಮಾಡಿರುತ್ತೇವೆ ಎಂದರೆ ಸರಿ. ಕೆ ಎನ್ ಎಪ್ ಡಿ ಜಿ 396  ಎಂದು ಸೀಲ್ ಹಾಕಿರುತ್ತೇವೆ ಎಂದರೆ ಸರಿ. ಸೀಲ್ ಮಾಡಿದ ವಸ್ತುಗಳು ಚಿತ್ತರಂಜನ್ ರಾವ್ ರವರ ಪ್ರಕರಣದ ಅಕ್ರ ಸಂಖ್ಯೆ 109/1993-94 ಎಂದು ಸಿಲ್ ಮಾಡಿ ಅಣವು, ಮತ್ತಿ,ಕಣಲ್, ಮರ್ವ ಎಲ್ಲಾ ಜಾತಿಯ ಮರದ ಕುತ್ತಿಗಳಿಗೆ ಸಿಲ್ ಮಾಡಿರುತ್ತೇವೆ ಎಂದರೆ ಸರಿ. ಆ ದಿನ ಮಹಜರು ಬರೆದಿದ್ದು ಕೊರಗಪ್ಪರವರು. ಶಿವಪ್ಪ ನಾಯಕ್ ಸ್ಥಳದಲ್ಲಿ ಇದ್ದರು ಎಂದರೆ ಸರಿ. 5 ಗುತ್ತಿ ಹಾಗೂ 5 ತುಂಡುಗಳನ್ನು ಸೀಜ್ ಮಾಡಿರುತ್ತೇವೆ ಎಂದರೆ ಸರಿ.  2 ಮಹಜರು ಮಾಡಿ ಮೇಲಾಧಿಕಾರಿಯವರಿಗೆ ಹೇಳಿಕೆ ಕೊಟ್ಟಿರುತ್ತೇವೆ ಎಂದರೆ ಸರಿ.ಮಹಜರು ಮತ್ತು FIR ಸ್ಥಳದಲ್ಲಿ ಮಾಡಿರುತ್ತೇನೆ ಎಂದರೆ ಸರಿ. ನನಗೆ 85 ವರ್ಷ ವಯಸ್ಸು ಆಗಿದ್ದರಿಂದ ದಾಖಲೆ ನೋಡಿದರೆ ಮಾತ್ರ ನೆನಪಿಗೆ ಬರುತ್ತಿದ್ದು, ಹಾಗೇ ಹೇಳಲು ಬರುತ್ತಿಲ್ಲ ಎಂದರೆ ಸರಿ. ನಾನೇ ತಯಾರು ಮಾಡಿದ ದಾಖಲೆಯನ್ನು ನೋಡಿದ ಮೇಲೆ ಗೊತ್ತಾಗಿರುತ್ತದೆ ಎಂದರೆ ಸರಿ. ಒಂದು FIR ಮತ್ತು ಒಂದು ಮಹಜರನ್ನು ನಾನೇ ಬರೆದಿರುತ್ತೇನೆ. ಸ್ವಾಧೀನ ಪಡಿಸಿಕೊಳ್ಳುವ ಪೂರ್ವದಲ್ಲಿ ಸೈಜ್ ಗಳನ್ನು ಉದ್ದ ಮತ್ತು ಸುತ್ತಳತೆಯನ್ನು ಅಳತೆ ಮಾಡಿ 32 ಮರದ ಸೈಜುಗಳನ್ನು ವಶಪಡಿಸಿಕೊಳ್ಳಲಾಗಿರುತ್ತದೆ.

<u>ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಎನ್ ಆರ್ ವಕೀಲರಿಂದಃ</u>

1. ಆರೋಪಿಯ ವಿರುದ್ಧ ಯಾರು ದೂರು ಕೊಟ್ಟಿರುತ್ತಾರೆ ಎಂದು ಹೇಳಲು ಈಗ ಆಗುವುದಿಲ್ಲ. ಯಾವಾಗ ದೂರು ನೀಡಿರುತ್ತಾರೆ ಎಂದು ಹೇಳಲು ನನಗೆ ಸಾಧ್ಯ ಇರುವುದಿಲ್ಲ. ಯಾವ ರೀತಿಯ ದೂರು ಬಂದಿರುತ್ತದೆ ಎಂದು ಗೊತ್ತಿರುವುದಿಲ್ಲ. ಅರ್ಜಿ ಬಂದಿರಬಹುದು ಅಥವಾ ಮೌಖಿಕವಾಗಿ ಬಂದಿರಬಹುದು ಎಂದು ನುಡಿಯುತ್ತಾರೆ. ಆರೋಪಿಯ ಮೇಲೆ ದೂರು ಬಂದ ಮೇಲೆ ಸ್ಥಳಕ್ಕೆ ಹೋಗಲು ಯಾರ ಅನುಮತಿ ಪಡೆದಿರುವುದಿಲ್ಲ. ನಾನು ದೂರಿನ ಆಧಾರದ ಮೇಲೆ ಸ್ಥಳಕ್ಕೆ ಹೋಗಿರುತ್ತೇನೆ. ನಾನು ಹೋಗುವಾಗ ನನ್ನ ಜೊತೆಗೆ ಕೊರಗಪ್ಪ ಗೌಡ ಹಾಗೂ ಶಾಹಿದ್ ಅಮೀದ್ ಇದ್ದರು. ಸಾಕ್ಷಿ ದಾಖಲೆ ನೋಡಬೇಕು ಎಂದು ನುಡಿಯುತ್ತಾರೆ.

2. ಕೊರಗಪ್ಪ ಗೌಡ ನನ್ನ ಕೈ ಕೆಳಗೆ ಕೆಲಸ ಮಾಡುತ್ತಿದ್ದ. ನಾನು ಕೊರಗಪ್ಪ ಗೌಡ ಹಾಗೂ ಶಾಹಿದ್ ಅಮೀದ್ ರವರನ್ನು ಕರೆದುಕೊಂಡು ಹೋಗಲು ಹಿರಿಯ ಅಧಿಕಾರರವರ ಅನುಮತಿ ಪಡೆದಿಲ್ಲ. ಕೊರಗಪ್ಪ ಗೌಡ ಹಾಗೂ ಶಾಹಿದ್ ಅಮೀದ್ ರವರು ಅಮಾಸೆಬೈಲು ಬೀಟೆನವರು. ನಾವು ತಕ್ಷೀರು ಸ್ಥಳಕ್ಕೆ ಎಷ್ಟು ಗಂಟೆಗೆ ಹೋಗಿದ್ದೇನೆ ಎಂದು ನೆನಪಿರುವುದಿಲ್ಲ. ನಾನು ಆ ಸ್ಥಳಕ್ಕೆ ನಡೆದುಕೊಂಡು ಹೋಗಿರಬಹುದು, ಅಥವಾ ಬೈಕ್ ನಲ್ಲಿ ಹೋಗಿರಬಹುದು, ಈಗ ನೆನಪಿಲ್ಲ. ನಮ್ಮ ಸಿಬ್ಬಂದಿಗಳು ಸಹ ನಡೆದುಕೊಂಡು ಬಂದಿರಬಹುದು, ಅಥವಾ ಬೈಕ್ ನಲ್ಲಿ ಬಂದಿರಬಹುದು. ನೆನಪಿರುವುದಿಲ್ಲ.

3. ಆರೋಪಿತರ ಸ್ಥಳಕ್ಕೆ ಹೋಗಿ ತಲುಪಿರುತ್ತೇನೆ. ಆರೋಪಿತನ ಸ್ಥಳದ ಬಗ್ಗೆ ನಿಖರವಾದ ಮಾಹಿತಿ ಇರುತ್ತದೆ. ತಕ್ಷೀರು ಸ್ಥಳ ಸರ್ಕಾರಿ ಜಾಗ ಆಗಿರುತ್ತದೆ. ಸರ್ಕಾರಿ ಜಾಗದಲ್ಲಿ ಯಾರು ಬೇಕಾದರೂ ಬರಬಹುದು ಯಾರು ಬೇಕಾದರೂ ಹೋಗಬಹುದು ಎಂದರೆ ಸರಿ. ಆರೋಪಿತರು ಮರ ಕಡಿದ ಬಗ್ಗೆ ಬೇರೆ ಯಾರು ನೋಡಿ ಹೇಳಿರುವುದಿಲ್ಲ. ಆರೋಪಿತನ ಸ್ವಾಧೀನದಿಂದಲೂ ಸಹ ಮರ ವಶಪಡಿಸಿಕೊಂಡಿರುವುದಿಲ್ಲ. ತೋಟದಲ್ಲಿ ಆಚಾರಿ ಮಾಡಿದ ಪುಡಿ ಸಿಕ್ಕಿದ್ದು ,ಆ ತೋಟದಲ್ಲಿ ಯಾವುದೇ ಶೆಡ್ ಇರುವುದಿಲ್ಲ. ಆ ಹುಡಿ ಸಿಕ್ಕಿದ್ದು ತೆಂಗಿನ ತೋಟದ ಮಧ್ಯದಲ್ಲಿ. ಎಷ್ಟು ದಿನದ ಹಿಂದೆ ಕೆಲಸ ಮಾಡಿರುತ್ತಾರೆ ಎಂದು ಗೊತ್ತಿರುವುದಿಲ್ಲ. ನಾನು ಹೋದ ಸಮಯ ಕೆಲಸ ಮಾಡಿರುವುದಿಲ್ಲ.

4. ನಾನು ಹೋಗಿದ್ದು 9 ನೇ ತಿಂಗಳಿನಲ್ಲಿ ಮಳೆಗಾಲ ಇರುತ್ತದೆ. ತಕ್ಷೀರು ಸ್ಥಳ ತುಂಬಾ ಮಳೆ ಬೀಳುವ ಪ್ರದೇಶ ಎಂದರೆ ಸರಿ. ತಕ್ಷೀರು ಸ್ಥಳಕ್ಕೆ ಹೋದಾಗ ಯಾದಸ್ತು ಮಾಡಿದ್ದು ಯಾವ ದಿನಾಂಕ ಎಂದರೆ ಸಾಕ್ಷಿ ಅಲ್ಲಿಯೇ ದಾಖಲೆಯಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ದಿನಾಂಕ 30-08-1993 ರಲ್ಲಿ ಮಹಜರು ಮಾಡಿರುತ್ತೇನೆ ಎಂದರೆ ಸರಿ. ಮಹಜರು ಮಾಡಿದ್ದಕ್ಕೆ 17 ಐಟಂ ಗಳು ಸಿಕ್ಕಿರುತ್ತದೆ ಎಂದರೆ ಸರಿ. ಮಹಜರಿನಲ್ಲಿ 17 ಸೈಜ್ ಗಳಲ್ಲಿ ಬೀಟೆ ಮರದ ಬಗ್ಗೆ ಹೇಳಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಪ್ರತ್ಯೇಕ ಇನ್ನೊಂದು ಮಹಜರು ಮಾಡಿರುತ್ತೇನೆ ಎಂದು

ನುಡಿಯುತ್ತಾರೆ. ಪ್ರತ್ಯೇಕ ಇನ್ನೊಂದು ಮಹಜರು ಮಾಡಿರುವುದು ದಿನಾಂಕ 09-09-1993 ರಲ್ಲಿ. ದಿನಾಂಕ 09-09-19993 ರ ಪ್ರತ್ಯೇಕ ಮಹಜರಿನಲ್ಲಿ ಬೀಟೆ ಮರದ ನಮೂದು ಇರುವುದು ಕಂಡು ಬರುವುದಿಲ್ಲ ಎಂದರೆ ಸರಿ. ನಮಗೆ ಬೀಟೆ ಮರದ ಮಹಜರು ನಾನು ಮಾಡಿರುವುದಿಲ್ಲ ಎಂದರೆ ಸಾಕ್ಷಿ ಇನ್ನೊಂದು ಮಹಜರು ಮಾಡಿರಬಹುದು ಎಂದು ನುಡಿಯುತ್ತಾರೆ. 3 ನೇ ಮಹಜರು ಮಾಡಿರಬಹದು. ಆ ದಾಖಲೆಯನ್ನು ನ್ಯಾಯಲಯಕ್ಕೆ ಕೊಟ್ಟಿರಬಹುದು.

5. ಫಾರಂ ನಂಬ್ರ 20/ನಿ.ಪಿ.2 ಬೀಟೆ 3 0.012 ಅಂದರೆ ಸಾಕ್ಷಿ ಚಿಕ್ಕ ಚಿಕ್ಕ ಪೀಸು ಇರುತ್ತದೆ. ಸಾಕ್ಷಿ ಅಬ್ಬಬ್ಬಾ 1 ಇಂಚಿನ ಪೀಸು ಇದ್ದಿರಬಹುದು. ಆ ರೀತಿಯ 3 ಪೀಸು ಸಿಕ್ಕಿರುತ್ತದೆ ಎಂದರೆ ಸರಿ. ಆ ರೀತಿಯ ಪೀಸುಗಳನ್ನು ಯಾರು ಬೇಕಾದರೂ ಎಲ್ಲಿ ಬೇಕಾದರೂ ಬೀಸಾಡುವ ಸಾಧ್ಯತೆ ಇದೆ ಎಂದರೆ ಸರಿ. ಸಾರ್ವಜನಿಕ ರಸ್ತೆಯಲ್ಲಿ, ಕಾಡಿನಲ್ಲಿ ಎಲ್ಲಿ ಬೇಕಾದರೂ ಆ ರೀತಿಯ ವಸ್ತುಗಳು ಸಿಗಬಹುದು ಎಂದರೆ ಸರಿ. ದಿನಾಂಕ 30-08-1993 ರಂದು ಮಹಜರಿಗೆ ಹೋದಾಗ ಯಾವುದಾದರೂ ವಸ್ತು ವಶಪಡಿಸಿದ್ದೀರಾ ಎಂದರೆ ಸಾಕ್ಷಿ ದಾಖಲೆ ನೋಡಿದರೆ ಹೇಳುತ್ತೇನೆ ಎಂದು ನುಡಿಯುತ್ತಾರೆ. ನಾನು 3 ಬಾರಿ ತಕ್ಷೀರು ಸ್ಥಳಕ್ಕೆ ಹೋಗಿದ್ದಿರಬಹುದು. ನಾವು ವಸ್ತುಗಳನ್ನು ದಿನಾಂಕ 30-08-1993 ರಂದೇ ವಶಪಡಿಸಿಕೊಂಡಿರುತ್ತೇನೆ.

6. ದಿನಾಂಕ 30-08-1993 ರಂದು ವಶಪಡಿಸಿಕೊಂಡ ವಸ್ತುಗಳನ್ನು ನಾವು ಒಟ್ಟಿಗೆ ತೆಗೆದುಕೊಂಡು ಬಂದಿರುತ್ತೇವೆ. ನಾವು ತಕ್ಷೀರು ಸ್ಥಳಕ್ಕೆ ಹೋದ ಮೇಲೆ ವಸ್ತುಗಳನ್ನು ವಶಪಡಿಸಿಕೊಂಡೇ ಆದಿನ ಕಚೇರಿಗೆ ಬಂದಿರುತ್ತೇವೆ. ಆ ಮಧ್ಯದಲ್ಲಿ ಬೇರೆ ಎಲ್ಲೂ ಹೊರಗಡೆ ಹೋಗಿರುವುದಿಲ್ಲ. ವಶಪಡಿಸಿಕೊಂಡ ವಸ್ತುಗಳನ್ನು ಟೆಂಪೋದಲ್ಲಿ ತಂದಿರಬಹುದು. ಟೆಂಪೋವನ್ನು ಯಾವಾಗ ತೆಗೆದುಕೊಂಡು ಬಂದಿರುತ್ತೇವೆ ಎಂದು ನೆನಪಿರುವುದಿಲ್ಲ. ನಾನು FIR ಸಲ್ಲಿಸಿದ ಮೇಲೆ ಹಿರಿಯ ಅಧಿಕಾರಿಗಳಿಗೆ ಮಾಹಿತಿ ಕೊಟ್ಟಿರುತ್ತೇನೆ. ಅದಕ್ಕೂ ಪೂರ್ವದಲ್ಲಿ ಮಾಹಿತಿ ಕೊಟ್ಟಿರುವುದಿಲ್ಲ. ನಾವು 3 ಜನ ಸಿಬ್ಬಂದಿಗಳನ್ನು ಹೋಗಿದ್ದು ಬಿಟ್ಟರೆ ಬೇರೆ ಯಾರು ಜನ ಬಂದಿರುವುದಿಲ್ಲ. ಬಂದಿದ್ದರೆ ಮಹಜರಿನಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ.

7. ತಕ್ಷೀರು ಸ್ಥಳಕ್ಕೆ ಹೋಗಲು ಮಹಜರು ಮುಗಿಸಿ ಕಚೇರಿಗೆ ಬಂದಿರುತ್ತೇವೆ. ಬೆಳಿಗ್ಗೆ ಯಾವ ರೀತಿ ಸ್ಥಳಕ್ಕೆ ಹೋಗಿದ್ದೇವೋ ಅದೇ ರೀತಿ ಕಚೇರಿಗೆ ಬಂದಿರುತ್ತೇವೆ. ಗುತ್ತಿಗೆ ಸಿಕ್ಕಿದ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸಾಕ್ಷಿ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ದಾಖಲೆ ನೋಡಿ ಹೇಳಬೇಕಾಗುತ್ತದೆ ಎಂದು ನುಡಿಯುತ್ತಾರೆ. ದಿನಾಂಕ 09-09-1993 ರಲ್ಲಿ ಇರುವ ನನ್ನ ಸಹಿ ಇರುವ ದಾಖಲೆಯಲ್ಲಿ ಬೀಟೆಯ ಗುತ್ತಿ ನಮೂದು ಇರುವ ಬಗ್ಗೆ ಕಾಣುವುದಿಲ್ಲ ಎಂದರೆ ಸರಿ. ದಿನಾಂಕ 09-09-1993 ರ ಮಹಜರಿಗೆ ಬೀಟ್ ಗಾರ್ಡ್ ಒಬ್ಬರು ಹೋಗಿರಬಹುದು. ಆ ದಿನ ಸಿಕ್ಕ ಗುತ್ತಿಗೂ ಹಾಗೂ ಸೈಜ್ ಗೂ ತಾಳೆ ಮಾಡಿ ನೋಡಿದ್ದೀರಾ ಎಂದರೆ ಸಾಕ್ಷಿ ಹೌದು ಎಂದು

ನುಡಿಯುತ್ತಾರೆ. ದಾಖಲೆಯಲ್ಲಿ ಬರೆದಿರುತ್ತದೆ ಎಂದು ನುಡಿಯುತ್ತಾರೆ.

8. ಸದರಿ ಯಾದಸ್ತುನಲ್ಲಿ ಗುತ್ತಿಗೆ ತಾಳೆ ಮಾಡಿದ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ. ತಕ್ಷೀರು ಸ್ಥಳಕ್ಕೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ. ಹಾಗಾಗಿ ಆ ಸ್ಥಳದಲ್ಲಿ ಆರೋಪಿತ ಸಿಕ್ಕಿರುವುದಿಲ್ಲ. ಯಾದಸ್ತುಗೆ ಸಿಬ್ಬಂದಿಗಳು ಪಂಚರಿರುತ್ತಾರೆ. ತಕ್ಷೀರು ಸ್ಥಳದ ಅಕ್ಕ ಪಕ್ಕದಲ್ಲಿ ಒಬ್ಬರದೇ ಮನೆ ಇರುತ್ತದೆ. ಹತ್ತಿರದಲ್ಲಿ ಯಾವುದೇ ಮನೆ ಇರುವುದಿಲ್ಲ. ದಾರಿಯಲ್ಲಿ ಮನೆಗಳು ಸಿಗುತ್ತದೆ. ಅವರನ್ನು ಪಂಚರನ್ನಾಗಿ ಮಾಡಿರುವುದಿಲ್ಲ. ಮಾಡಲು ತೊಂದರೆ ಇರುವುದಿಲ್ಲ.

9. ಬೀಟೆ ಮರವನ್ನು ಖರೀದಿ ಮಾಡಿ ಉಪಯೋಗಿಸಲು ತೊಂದರೆ ಇರುವುದಿಲ್ಲ ಎಂದರೆ ಸಾಕ್ಷಿ ಬೀಟೆ ಮರಗಳನ್ನು ಸರ್ಕಾರದಿಂದ ಕ್ರಯಕ್ಕೆ ಪಡೆಯಬಹುದು ಎಂದು ನುಡಿಯುತ್ತಾರೆ. ಸಾಕ್ಷಿಗೆ ದಿನಾಂಕ 20-11-1992 ರ ದಾಖಲೆ ತೋರಿಸಿದ್ದು ಇದು ಅಮಾಸಬೈಲಿನ ಡಿಪೋದು ಅಂತ ನುಡಿದಿರುತ್ತಾರೆ. ಸದರಿ ದಾಖಲೆಯನ್ನು ನಿ.ಡಿ.**1** ಎಂದು ಗುರುತಿಸಿರುತ್ತಾರೆ. ಡಿಪೋದಿಂದ ಖರೀದಿ ಮಾಡಿದ್ದು ಎಂದು ನುಡಿಯುತ್ತಾರೆ. ದಿನಾಂಕ 13-01-1993 ರಂದು ನಿ.ಡಿ. 1 ರ ದಾಖಲೆಯಲ್ಲಿ ಖರಿದಿ ಮಾಡಿದ ಪ್ರಭಾಕರ ಸಾಮೀಲ್ ಸಿದ್ದ ಮಾಡಿದ ಬಗ್ಗೆ ಕ್ಯಾಶ್ ಬಿಲ್ ಇರುತ್ತದೆ ಹಾಗೂ ದಿನಾಂಕ 13-01-1993 ರಂದು ಸದರಿ ಶ್ಯಾಮ್ ಸುಂದರ್ ಭಾಗವತ್ ರವರು ಆರೋಪಿಗೆ ಬೀಟೆ ಮರಗಳನ್ನು ಕ್ರಯದ ರಶೀದಿ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಈಗ ನೋಡುತ್ತಿದ್ದೇನೆ ಎಂದು ನುಡಿಯುತ್ತಾರೆ. ಸದರಿ ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದು ನುಡಿದಿದ್ದರಿಂದ ಸದರಿ 2 ದಾಖಲೆಗಳನ್ನು ಗುರುತಿಸಿರುವುದಿಲ್ಲ.

10. ನಾನು FIR ಹಾಕಿದಾಗ ಆರೋಪಿತ ಸಿಕ್ಕಿರುವುದಿಲ್ಲ. ದಿನಾಂಕ 30-08-1993 ರ ನಂತರ ದಿನಾಂಕ 09-09-1993 ರಂದು ಹೋಗಿದ್ದು ಆ ಸಮಯದಲ್ಲಿ ಯಾರನ್ನು ನೋಡಿರುವುದಿಲ್ಲ. ಆ ಎರಡು ಸಮಯದಲ್ಲಿ ಆರೋಪಿತನಾಗಲೀ, ಆತನ ಕೆಲಸದವರು ಯಾರು ಸಿಕ್ಕಿರುವುದಿಲ್ಲ. ಆರೋಪಿಗೆ ಬೇಲ್ ಯಾವಾಗ ಸಿಕ್ಕಿರುತ್ತದೆ ಎಂದು ಗೊತ್ತಿರುವುದಿಲ್ಲ. FIR ಆದ ನಂತರ ನಾನು ಅವರ ಬಳಿ ವಿಚಾರಿಸಲು ಹೋಗಿರುವುದಿಲ್ಲ. ತಕ್ಷೀರು ಸ್ಥಳದ ಸರ್ವೆ ನಂಬರ್ ನನಗೆ ಗೊತ್ತಿರುವುದಿಲ್ಲ. ತಕ್ಷೀರು ಸ್ಥಳದ ಆಸುಪಾಸು ಏನು ಇರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಆರೋಪಿತ ಆ ಗ್ರಾಮದಲ್ಲಿ 1993 ರಲ್ಲಿ ಆ ಗ್ರಾಮದ ಒಬ್ಬ ರಾಜಕೀಯ ವ್ಯಕ್ತಿ ಆಗಿದ್ದರು ಎಂದರೆ ಸಗೊತ್ತಿಲ್ಲ. ಆ ಸಮಯ ತೋಟ ಇತ್ತು. ಹೆಸರು ಇರುವುದಿಲ್ಲ. ಆ ರೀತಿಯ ಹೆಸರು ಇರುವವರ ಮೇಲೆ ದ್ವೇಷ ಇರುತ್ತದೆ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ಈ ಪ್ರಕರಣದಲ್ಲಿ ಹಿರಿಯ ಅಧಿಕಾರಿಗಳಿಂದ ಒತ್ತಡ ಇತ್ತು ಎಂದರೆ ಸರಿಯಲ್ಲ. ಸಾಕ್ಷಿ ನಮ್ಮ ಕೆಲಸ ನಾವು ಮಾಡಿರುತ್ತೇವೆ ಎಂದು ನುಡಿಯುತ್ತಾರೆ.

11. ಆರೋಪಿಗೆ ಒಳ್ಳೇ ಹೆಸರು ಇದ್ದರಿಂದ ಕೆಲವೊಂದು ಗುಂಪಿನ ಜನರು ಆರೋಪಿಯ ವಿರುದ್ಧ ಸುಳ್ಳು ದೂರು ಸಲ್ಲಿಸಿ ನನ್ನ ಮುಖಾಂತರ ಸುಳ್ಳು ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತನ ಮೇಲೆ ದ್ವೇಷದಿಂದ  ಈ ಪ್ರಕರಣ ಸಲ್ಲಿಸಿದ್ದು ಬಿಟ್ಟರೆ ಬೇರೆ ಯಾವುದೇ ಸತ್ಯಾಂಶ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಅರಣ್ಯ ಪ್ರದೇಶದಲ್ಲಿ ಸಿಗುವ ಮರಗಳನ್ನು ಸೀಜ್ ಮಾಡುತ್ತೇವೆ ಎಂದರೆ ಸರಿ. ನಾವು ವಶಪಡಿಸಿಕೊಂಡ ಮರಕ್ಕೂ ಆರೋಪಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾವುಬೇರೆ ವ್ಯಕ್ತಿಗಳ ಪ್ರಚೋದನೆಯಿಂದ ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

ಓದಿ ಹೇ. ಕೇ. ಸರಿ ಇದೆ.

ನನ್ನ ಹೇ. ಮೇ. ಬೆ. ಮಾಡಲಾಗಿದೆ

ಪ್ರಧಾನ_ ಸಿವಿಲ್ ನ್ಯಾಯಾದೀಶರು
ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ